ನಾನು ಈ ಒಂದು ಸಲಹೆಯನ್ನು ಮಾಡುತ್ತೇನೆ ಇದನ್ನು ಅಮೆಂಡ್‌ಮೆಂಟ್‌ನಲ್ಲಿ ಇನ್‌ಕಾರ್ಪೊರೇಟ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎನ್ ಚಿಕ್ಕೇಗೌಡ.— ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂಥ ಅಮೆಂಡ್‌ಮೆಂಟಿನಲ್ಲಿ ನ್ಯಾಚುರಲ್ ಜಸ್ಟೀಸ್ ಇದೆ. We have no objection to accept it.

ಶ್ರೀ ಕೆ. ಎಚ್. ಹನುಮೇಗೌಡ.— ತಮ್ಮ ಮಸೂದೆಯು ಪ್ರಕಾರ, ಸಾಲ ತೆಗೆದುಕೊಂಡ ರೈತರು, ಸಾಲವನ್ನು ಕೊಡದೆ ಹೋದ ಸಂದರ್ಭದಲ್ಲಿ ಬ್ಯಾಂಕ್‌ನವರು ಅವರ ಜಮೀನನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾರೆ. ಅವರು ಐದು ವರ್ಷವಾದಮೇಲೆ ಪುನಃ ಮಾರಾಟಮಾಡಿಕೊಳ್ಳಬಹುದೆಂ ಎನ್ನುವ ಪ್ರಾವಿಷನ್ ಈ ಬಿಲ್ಲಿನಲ್ಲಿದೆ. ಇಲ್ಲಿ ನಾನು ಒಂದು ಸೂಚನೆ ಮಾಡುತ್ತೇನೆ. ಏನೆಂದರೆ, ಐದು ವರ್ಷದೊಳಗೆ ರೈತರು ಸಾಲ, ಬಡ್ಡಿ ಎರಡನ್ನೂ ವಾಪಸ್ ಕೊಡುತ್ತೇವೆಂದು ಹೇಳಿದರೆ ಭೂಮಿಯನ್ನು ವಾಪಸ್ ಕೊಡಿ, ಎಂದು ಇದಕ್ಕೆ ಅವಕಾಶ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

Madam SPEAKER.— I will put the consideration motion to the vote of the House. The question is:

"That the Karnataka Agricultural Credit Operations and Miscellaneous Provisions Bill, 1974, be taken into consideration."

The motion was adopted.

10-30 A.M.

Madam SPEAKER.— Clause by clause consideration of the Bill will be taken up on some other day. Now, the next Bill may be moved by the Hon. Minister for Transport and Housing.

KARNATAKA MOTOR VEHICLES TAXATION (AMENDMENT) BILL, 1974, MOTION TO CONSIDER

SRI K. H. RANGANATH (Minister for Transport and Housing) I move.

"That the Karnataka Moter Vehicles Taxation (Amendment) Bill, 1974, be taken into consideration."

Madam SPEAKER. — Motion moved

"That the Karnataka Motor Vehicles Taxation (Amendment) Bill, 1974 be taken into consideration."

† SRI K. H. RANGANATH.— Madam Speaker, this is a very small measure seeking to amend clause 2, part A of the Schedule to the Karnataka Motor Vehicles Taxation Act. This measure is brought forward with a view to raising the resources of the State as was announced by the Hon. Finance Minister during his Budget Speech.

(SRI K. H. RANGANATH)

I do not want to speak much on the Bill except to say that this is a very small enactment. I commend the Bill for the acceptance of the House.

† ಶ್ರೀ ಟಿ ಆರ್. ಶಾಮಣ್ಣ.— ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಅಮೆಂಟ್‌ಮೆಂಟ್ ಬಿಲ್ಲನ್ನು ನಾನು ವಿರೋಧಿಸಬೇಕಾಗಿದೆ. ಕಾರಣ ವಾದರೂ ಇಷ್ಟೆ. ನಾಗರೀಕರಿಗೆ ಹೆಚ್ಚಿನ ಸೌಲಭ್ಯವನ್ನು ಕೊಡದೆ ಪರ್ಪರ್ಪವೂ ಹೆಚ್ಚು ತೆರಿಗೆ ಹಾಕತಕ್ಕ ನೀತಿಯನ್ನು ವಿರೋಧಿಸಬೇಕಾಗಿದೆ. ಈಗ ತಂದಿರತಕ್ಕ ಮಸೂದೆ ಪ್ರಕಾರ ಸ್ಕೂಟರ್‌ಗಳು ಮತ್ತು ಮೋಟಾರ್ ಸೈಕಲ್‌ಗಳಿಗೆ ರಿಜಿಸ್ಟ್ರೇಷನ್ ಫೀಜು ಹೆಚ್ಚಿಸತಕ್ಕುದ್ದು ಇದೆ. ಆದರೆ ಕಾರ್ ಮತ್ತು ಮೋಟಾರ್ ವೆಹಿಕಲ್ಸ್‌ನು ಯಾವ ಕಮರ್ಷಿಯಲ್ ಪರ್ಪಸ್‌ಗೂ ಉಪಯೋಗಿಸುವುದಿಲ್ಲ. ಸ್ಕೂಟರ್‌ಗಳನ್ನು ಬಡವರು ಮತ್ತು ಮಧ್ಯಮ ವರ್ಗದವರು ಉಪಯೋಗಿಸುತ್ತಾರೆ. ಒಂದು ಕಡೆ ಪೆಟ್ರೋಲ್ ಬೆಲೆ ಜಾಸ್ತಿ ಆಗಿದೆ ಇನ್ನೊಂದು ಕಡೆ ಎಕ್ಸೈಸ್ ಡ್ಯೂಟಿ ಹೆಚ್ಚಾಗಿದೆ. ಮತ್ತೊಂದು ಕಡೆ ಸ್ಪೇರ್ ಪಾರ್ಟ್ಸ್‌ಗೆ ಬೆಲೆ ಹೆಚ್ಚಾಗಿದೆ, ವಾಹನ ಸೌಕರ್ಯವನ್ನು ಸಹಜಾಗಿ ಒದಗಿಸದೇ ಇರುವ ಈ ಕಾಲದಲ್ಲಿ ಕಣ್ಣು ವಾಹನಗಳನ್ನು ಇಟ್ಟುಕೊಂಡಿರುವವರ ಮೇಲೆ ಹೆಚ್ಚು ಹೆಚ್ಚು ತೆರಿಗೆ ಹಾಕುವುದು ಉಚಿತವಲ್ಲ. ನಾನು ಮೊದಲು ಒಂದು ಕಾರ್ ಇಟ್ಟಿದ್ದೆ, ಆ ಕಾಲದಲ್ಲಿ ೪೦೦ ರೂಪಾಯಿಗಳಿಗಿಂತ ಹೆಚ್ಚಿಗೆ ಮೈಂಟೆನೆನ್ಸ್‌ಗೆ ಖರ್ಚಾಗುತ್ತಿತ್ತು. ಈಗ ಒಬ್ಬ ಡ್ರೈವರ್‌ನ್ನು ಇಟ್ಟುಕೊಂಡು ಒಂದು ಕಾರ್ ಇಡಬೇಕಾದರೆ ೭೫೦ ರೂಪಾಯಿಗಳಿಗಿಂತ ಕಡಿಮೆ ಆಗುವುದಿಲ್ಲ. ೭೫೦ ರೂಪಾಯಿ ಇದ್ದರೆ ಈ ಕಾಲದಲ್ಲಿ ಒಂದು ಬಡ ಸಂಸಾರ ಜೀವನ ಮಾಡುವುದಕ್ಕಾಗುತ್ತದೆ. ಕಾರ್ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ ಆದುದರಿಂದ ಕಾರ್ ಬಿಟ್ಟು ಸ್ಕೂಟರ್‌ಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಅವುಗಳ ಮೇಲೆ ತೆರಿಗೆ ಹೆಚ್ಚಿಸಿರುವುದು ಅಷ್ಟು ಔಚಿತ್ಯವಲ್ಲ, ಇದರ ಬಗ್ಗೆ ಸ್ವಲ್ಪ ಯೋಜನೆ ಮಾಡಬೇಕು. ವರ್ಷೇ ವರ್ಷೇ ಬೆಂಗಳೂರು ಡಿವಿಜನ್‌ನಲ್ಲಿ ಮೋಟಾರ್ ವೆಹಿಕಲ್ಸ್ ಮೇಲ ಬೇಕಾದಷ್ಟು ಟ್ಯಾಕ್ಸ್ ವಸೂಲು ಮಾಡುತ್ತಿದ್ದೇವೆ ಬೆಂಗಳೂರು ಆರ್.ಟಿ.ಓ ಆಫೀಸಿಗೆ ಮಾನ್ಯ ಮಂತ್ರಿಗಳು ಒಂದುಸಾರಿ ದಯವಿಟ್ಟು ಹೋಗಿ ನೋಡಬೇಕು. ಅದು ಯಾವಾಗಲೋ ಬಿದ್ದು ಹೋಗುವಹಾಗೆ ಇದೆ. ಅಲ್ಲಿ ಟ್ಯಾಕ್ಸ್‌ನ್ನು ಕಟ್ಟುವುದಕ್ಕೆ ಬರುವವರಿಗೆ ನಿಂತುಕೊಳ್ಳುವುದಕ್ಕೆ ಜಾಗ ಇಲ್ಲ ಒಂದು ಸಾರಿ ಮಾನ್ಯ ಮಂತ್ರಿಗಳು ಹೋಗಿ ಸ್ಥಳ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಐದುವರೆ ಕೋಟಿ ರೂಪಾಯಿ ಕೊಡತಕ್ಕ ಜನಗಳಿಗೆ ಯಾವರೀತಿ ಅನುಕೂಲ ಇದೆ, ಎಂದು ಅವರೇ ನೋಡಲಿ. ಇದರ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಜನಗಳು ಬಿಸಿಲಿನಲ್ಲಿ ನಿಂತು ಕಷ್ಟ ಪಡುವುದನ್ನು ತಪ್ಪಿಸಿದಂತಾಗುವುದಿಲ್ಲ. ಐದುವರೆ ಕೋಟಿ ರೂಪಾಯಿ ಜನರಿಂದ ವಸೂಲು ಮಾಡಿ ಅವರಿಗೆ ಅನುಕೂಲವನ್ನು ಕಲ್ಪಿಸಿ ಕೊಡದಿದ್ದರೆ ಆ ಜನಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ ಎಂದು ಹೇಳುತ್ತೇನೆ.

ಎರಡನೆಯದಾಗಿ ಹಿಂದಿನ ತಿಂಗಳಿನಲ್ಲಿ ನಾನು ಒಂದು ರಿಜಿಸ್ಟ್ರೇಷನ್‌ಗೆ ಕೊಟ್ಟ ಪುಸ್ತಕ ಇನ್ನೂ ರಿಜಿಸ್ಟ್ರೇಷನ್ ಆಗಿ ಬಂದಿಲ್ಲ. ರಿಜಿಸ್ಟ್ರೇಷನ್ ಮಾಡಲು ತಿಂಗಳುಗಟ್ಟಲೇ ಸತಾಯಿಸುತ್ತಾರೆ. ಇದರಲ್ಲಿ ಅನೇಕ ನ್ಯೂನತೆಗಳಿವೆ. ಅದರ ಬಗ್ಗೆ ಯೋಚನೆ ಮಾಡಬೇಕು. ಹಣ ಸಂಪಾದನೆ ಮಾಡುವಂಥ ಇಲಾಖೆಗೆ ಬೇಕಾದ ಸೌಲಭ್ಯವನ್ನು ಕೊಡದೇ ಹೋದರೆ ಜನಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

ಮೂರನೆಯದಾಗಿ ಪದೇ ಪದೇ ಹೇಳುತ್ತಲೇ ಇದ್ದೇನೆ. ಬೆಂಗಳೂರು ನಗರ ಕಾರ್ಪೊರೇಷನ್‌ನಲ್ಲಿ ಮೊದಲು ಇದ್ದಂಥ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಮತ್ತು ಟೋಲ್ ಟ್ಯಾಕ್ಸ್ ತೆಗೆದಮೇಲೆ ಆ ತೆರಿಗೆಯನ್ನು ಕಾಂಪನ್ಸೇಟ್ ಮಾಡುವುದಕ್ಕೋಸ್ಕರ ಲೋಕಲ್ ಬಾಡೀಸ್‌ಗೆ ೧೯೫೬ರಲ್ಲಿ ಏನು ಒಂದು ಹಣವನ್ನು ಗೊತ್ತು ಮಾಡಿದ್ದರೋ ಆದೇ ಹಣವನ್ನು ಈವತ್ತೂ ಕೊಡುತ್ತಿದ್ದಾರೆ. ೧೯೫೬ರಲ್ಲಿ ಬೆಂಗಳೂರು ನಗರ ಕಾರ್ಪೊರೇಷನ್‌ನವರು ರಸ್ತೆಗಳಿಗೆ ೧೫ ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದು ಇವತ್ತು ೧ ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದಾರೆ. ರಿಜಿಸ್ಟ್ರೇಷನ್‌ನಿಂದ ಹಿಂದೆ ೭೫ ಲಕ್ಷ ರೂಪಾಯಿ ಆದಾಯ ಬರುತ್ತಿದ್ದು ಇವತ್ತು ಐದೂವರೆ ಕೋಟಿ ರೂಪಾಯಿ ಬರುತ್ತಿದೆ. ಈಗ ೨೦೯೫ಷ್ಟು ಹೆಚ್ಚಿಗೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ಬೆಂಗಳೂರು ಡಿವಿಜನ್‌ನಲ್ಲಿ ಕಲೆಕ್ಟ್ ಮಾಡುತ್ತಿದ್ದಾರೆ. ಆದರೆ ಕಾರ್ಪೊರೇಷನ್ ಮತ್ತು ಲೋಕಲ್ ಬಾಡೀಸ್‌ಗೆ ೧೯೫೬ರಲ್ಲಿ ಗೊತ್ತು ಮಾಡಿದ ಹಣವನ್ನೇ ಇನ್ನೂ ಕೊಡುತ್ತಾ ಇರುವುದು ನ್ಯಾಯವಾದುದಲ್ಲ. ಆದಷ್ಟುಬೇಗ ಈ ವಿಚಾರವನ್ನು ತ್ವರಿತವಾಗಿ ಆಲೋಚನೆ ಮಾಡಿ ಆದಷ್ಟು ಬೇಗ ಸ್ಥಳೀಯ ಸಂಸ್ಥೆಗಳಿಗೆ ಕಾರ್ಪೊರೇಷನ್‌ಗಳಿಗೆ ಹೆಚ್ಚಿನ ಕಾಂಪನ್‌ರೇಷನ್ ಕೊಡಬೇಕೆಂದು ಹೇಳುತ್ತೇನೆ.

ಈಗ ಅನೇಕರು ಫಾಲ್ಸ್ ರಿಜಸ್ಟ್ರೇಷನ್ ಸರ್ಟಿಫಿಕೇಟ್ ಕೊಡುತ್ತಿದ್ದಾರೆಂದು ದೂರು ಬಂದಿದೆ. ಇದರಲ್ಲಿ ಅನೇಕ ಪ್ರಜೆಂಟ್‌ಗಳೂ ಸೇರಿಕೊಂಡಿದ್ದಾರೆ. ಆದುದರಿಂದ ಯಾವ ಪೆಹಿಕಲ್ ಕೂಡ ತಪ್ಪಿಸಿಕೊಳ್ಳದ ಹಾಗೆ ರಿಜಿಸ್ಟ್ರೇಷನ್ ಮಾಡಿದರೆ ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ಇದರ ಕಡೆಗೆ ಗಮನ ಕೊಡಬೇಕು. ವಾ ಪೌರಕ್ಯಾಗಲಿ, ವ್ಯವಹಾರಕ್ಯಾಗಲಿ, ವಾಹನ ಸೌಕರ್ಯ ಅಗತ್ಯವಾಗಿದೆ. ಕಾಲ ಮಂತ್ರು ಡಿಸ್ಪೆನ್ಸ್, ಎರಡನ್ನೂ ಕೂಡ ಬಹಳ ಬೇಗ ಕವರ್ ಮಾಡಬೇಕಾದ ಪಕ್ಷದಲ್ಲಿ ಪೆಹಿಕಲ್ಸ್ ಬೇಕಾಗುತ್ತದೆ. ಪದೇ ಪದೇ ಟ್ಯಾಕ್ಸನ್ನು ಹಾಕುತ್ತಾ ಬಂದರೆ ಜನ ಸಂಚಾರಕ್ಕೆ, ಸಾಮಾನುಗಳನ್ನು ಸಾಗಿಸುವದಕ್ಕೆ ಕಷ್ಟವಾಗುತ್ತದೆ. ವಸೂಲಾಗಬೇಕಾದ ಹಣವನ್ನು ವಸೂಲು ಮಾಡದೆ ತೆರಿಗೆಗಳನ್ನು ಹೆಚ್ಚಿಸುತ್ತಾ ಹೋಗುವುದು ಸರಿಯಲ್ಲ ಎಂದು ಹೇಳುತ್ತೇನೆ. ಆದುದರಿಂದ ಈಗ ತಂದಿರತಕ್ಕ ಬಿಲ್‌ನ್ನು ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ನಾನು ಒಬ್ಬ ಹಿರಿಯ ಶಾಸಕನಾಗಿ ಈ ಸಭೆಯ ಹಿರಿಯ ಶಾಸಕನಾಗಿ ಈ ಸಭೆಯ ಸ್ಥಾನದಿಂದ ಬಹಳ ಸಂತೋಷದಿಂದ ಒಪ್ಪಿದ್ದೇನೆ. ಕರ್ನಾಟಕ ರಾಜ್ಯ ಶಾಸನ ಸಭೆಯಲ್ಲಿ ಈ ಸಮಸ್ಯೆಯ ವಿಚಾರದಲ್ಲಿ ಅವುಗಳನ್ನು ಬಗೆಹರಿಸತಕ್ಕ ರೀತಿಯಲ್ಲಿ ಏನು ಮಾಡಬೇಕೆಂಬುದನ್ನು ಹೆಚ್ಚಾಗಿ ನನಗಿಂತ ಉಗ್ರವಾಗಿ ಯಾರೂ ವಾದ ಮಾಡಿಲ್ಲ ಎಂದು ನಾನು ತಮಗೆ ಜ್ಞಾಪಕಕ್ಕೆ ತಂದು ಕೊಡುತ್ತೇನೆ. ರಾಜ್ಯಾಂಗದತ್ತವಾಗಿ ಜಾರಿಗೆ ತರಬೇಕಾದ್ದನ್ನು, ಮತ್ತು ರಾಜ್ಯಾಂಗದಲ್ಲಿರತಕ್ಕ ರಕ್ಷಣೆಗಳನ್ನು ಏನ್ನು ಜಾರಿಗೆ ಕೊಡಬೇಕಾಗಿತ್ತೋ ಅದನ್ನ ಸಾಕಷ್ಟು ರೀತಿಯಲ್ಲಿ ಜಾರಿಗೆ ಕೊಟ್ಟಿಲ್ಲ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಶೈಕ್ಷಣಿಕ ಕ್ಷೇತ್ರದಲ್ಲಿ ಎಷ್ಟು ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲ. ಈ ಒಂದು ಜನಗಳ ಪ್ರಗತಿ ಎಷ್ಟರಮಟ್ಟಿಗೆ ಆಗಿದೆ, ಇವರಲ್ಲಿರ ತಕ್ಕ ಸಮಸ್ಯೆಗಳನ್ನು ಎಷ್ಟರಮಟ್ಟಿಗೆ ಬಗೆಹರಿಸಲಾಗಿದೆ ಎನ್ನುವುದನ್ನು ಹೋಲಿಸಿ ನೋಡಿದರೆ ಪ್ರಗತಿ ಯಾಗಿರತಕ್ಕದ್ದು ಬಹಳ ಕಡಿಮೆ ಕಾಣತಕ್ಕದ್ದು ಸಹಜವಾಗಿದೆ. ರಾಜ್ಯ ಸರ್ಕಾರದವರು ಬಹಳ ಆತುರ ದಿಂದ ಆಕಾಂಕ್ಷೆಯಿಂದ ಜನತೆಯ ಸಮಸ್ಯೆಯನ್ನು ಅರಿತು ಅವರ ಹಿತವನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ಕಾಪಾಡಿಕೊಂಡು ಬಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಎಲ್ಲಾ ಪ್ರಜೆಗಳಿಗೂ ಇರತಕ್ಕ ರಕ್ಷಣೆಗಳನ್ನು ಒದಗಿಸಿ ಕೊಟ್ಟು ಅವರು ತಮ್ಮ ಎಲ್ಲಾ ಹಕ್ಕುಬಾಧ್ಯತೆಗಳನ್ನೂ ಚಲಾಯಿಸಿ ಮುಂದೆ ಬರಬೇಕು ಎಂಬುದು ಮುಂಖ್ಯ ಗುರಿ. ಈ ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ಜ್ಞಾಪಕ ಮಾಡುತ್ತೇನೆ. ಶ್ರೀಮಾನ್ ಕಬಾಡಿಯವರು ಈ ಸಮಾಜ ಕಲ್ಯಾಣ ಇಲಾಖೆಗೆ ಹರಿಜನ ಗಿರಿಜನರ ಉದ್ಧಾರದ ಬಗ್ಗೆ ಬಜೆಟ್ಟಿನಲ್ಲಿ ಒದಗಿಸಿರತಕ್ಕ ಹಣ ಬಹಳ ಕಡಿಮೆ ಇದೆ, ಇತರ ಇಲಾಖೆಗಳಿಗೆ ಹೆಚ್ಚು ಹಣವನ್ನು ಒದಗಿಸಿದ್ದೀರಿ ಎಂದು ಹೇಳಿದರು. ಈ ಸಂದರ್ಭದಲ್ಲಿ ಆ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ ೮-೧೨-೧೯೭೩ರಲ್ಲಿ ಮಾನ್ಯ ಮುಂಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜಅರಸ್ ಅವರು ಕೇಂದ್ರ ಸರ್ಕಾರದ ಯೋಜನಾ ಸಚಿವರಾದ ಶ್ರೀ ಧಾರ್ ಅವರ ಜೊತೆಯಲ್ಲಿ ಮಾತುಕತೆ ನಡೆಸಿ ಹರಿಜನ ಗಿರಿಜನರ ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ೨೫ ಕೋಟಿ ರೂಪಾಯಿಗಳ ಒಂದು ಸ್ಪೆಷಲ್ ಪ್ಲಾನ್ ಮಾಡಬೇಕು ಎನ್ನುವುದನ್ನು ಪ್ಲಾನಿಂಗ್ ಕಮಿಷನ್ನಿನಲ್ಲಿ ಒಪ್ಪಿಸಿ ಅದನ್ನು ೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಬಹಳ ಒತ್ತಾಯಪೂರ್ವಕವಾಗಿ ಕೇಳಿದ್ದಾರೆ. ರಾಷ್ಟ್ರದಲ್ಲಿ ಹಣಕಾಸಿನ ಪರಿಸ್ಥಿತಿ ಬಹಳ ತೊಂದರೆಯಲ್ಲಿದ್ದು ಯೋಜನೆಗಳ ವಿಚಾರದಲ್ಲಿ ಎಲ್ಲಾ ಉದ್ದೇಶಗಳಿಗೆ ಎಂದರೆ ಆಹಾರದ ಉದ್ದೇಶಗಳಿಗೆ, ದೊಡ್ಡ ನೀರಾವರಿ, ಸಣ್ಣ ನೀರಾವರಿ ಯೋಜನೆಗಳಿಗೆ ಬಹಳ ಹೆಚ್ಚಿನ ಮತ್ತು ಅತಿ ಉತ್ಸವಂವಾದ ಯೋಜನೆಗಳನ್ನು ಮಾಡಿ, ಇನ್ನು ಅನೇಕ ವಿಧವಾದ ಕಾರ್ಯಕ್ರಮಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಪರಿಸ್ಥಿತಿ ಬಂದಿರುವುದರಿಂದ ನನ್ಮ ಯೋಜನೆಗಳಿಗೆ ೧೨ ೧/೨ ಕೋಟಿ ರೂಪಾಯಿಗಳನ್ನು ಮಾತ್ರ ಒದಗಿಸಿದರು. ನಿನ್ನೆಯ ದಿವಸ ನಾನು ನಮ್ಮ ಮಾನ್ಯ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಮಾತನಾಡಿ ಈ ಸಮಸ್ಯೆಯನ್ನು ಅವರ ಗಮನಕ್ಕೆ ತಂದಿದ್ದೇನೆ. ಸಾಮಾಜಿಕ ಯೋಜನೆಗಳು ಏನಿವೆಯೋ ಅವುಗಳಿಗೆ ಪ್ಲಾನ್‌ನಲ್ಲಿ ಮತ್ತು ನಾನ್ ಪ್ಲಾನ್‌ನಲ್ಲಿ ಸಪ್ಲಿಮೆಂಟರಿ ಗ್ರಾಂಟ್‌ನಲ್ಲಿ ಕೂಡ ಹೆಚ್ಚು ವರಿ ಹಣವನ್ನು ಕೊಡಂವ್ಹದಕ್ಕೆ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಶ್ರೀಮಾನ್ ಕಬಾಡಿಯವರು ಹಾಗೂ ಇತರ ಮಾನ್ಯ ಸದಸ್ಯರು ಈ ಬಾಬಿಗೆ ಏನು ಹೆಚ್ಚು ಹಣವನ್ನು ಒದಗಿಸಿಲ್ಲ ಎಂದು ಹೇಳಿದ್ದಾರೆಯೋ ಅದನ್ನು ಒಪ್ಪಿಕೊಂಡರೂ ಕೂಡ ಹೆಚ್ಚಿನ ಪ್ರಮಾಣದಲ್ಲಿ ಈ ಬಾಬಿಗೆ ಹಣವನ್ನು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತಾರೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಇನ್ನೊಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಈ ಬಗ್ಗೆ ನಾನು ನಿನ್ನೆ ರಾತ್ರಿ ಪ್ರಸ್ತಾಪ ಮಾಡಿದ್ದೇನೆ. ನೇರವಾಗಿ ಹರಿಜನ ಗಿರಿಜನರ ಅಭಿವೃದ್ಧಿಯಾಗಬೇಕಾದರೆ ಸ್ಥಳೀಯ ಸಂಸ್ಥೆಗಳಂ ವ್ಯಕ್ತಿಗಳಿಗೆ ಸೌಲಭ್ಯಗಳನ್ನು ಒದಗಿಸಿಕೊಡತಕ್ಕ ಯೋಜನೆಗಳಂ ಏನಿವೆಯೋ ಅವುಗಳಲ್ಲಿ ಹರಿಜನ ಗಿರಿಜನರ ಅಭಿವೃದ್ಧಿಗಾಗಿ ೧೦೦ಕ್ಕೆ ೧೫ರಷ್ಟು ಹಣವನ್ನು ವಿನಿಯೋಗಿಸಬೇಕು ಎನ್ನುವ ಪ್ರಯತ್ನವನ್ನು ನಾನು ಸಮಾಜಕಲ್ಯಾಣ ಹಾಗೂ ಸಮುದಾಯ ಅಭಿವೃದ್ಧಿ ಇಲಾಖೆಯ ವಂತ್ರಿಯಾಗಿ ಪ್ರಯತ್ನ ಮಾಡುತ್ತಿದ್ದೇನೆ. ಈ ದಿಶೆಯಲ್ಲಿ ಕೆಲವು ಇಲಾಖೆಗಳವರು ಒಪ್ಪಿಕೊಂಡಿದ್ದಾರೆ. ಅದನ್ನು ಪಂಚವಾರ್ಷಿಕ